# ಕಾಣೆಯಾಗುತ್ತಿರುವ ಹೆಣ್ಣುಮಕ್ಕಳು

**ಸ್ವತಂತ್ರ ಭಾರತದಲ್ಲಿ ಗಂಡು-ಹೆಣ್ಣು ಮಕ್ಕಳ ಅನುಪಾತ ಇಷ್ಟೊಂದು ತೀವ್ರವಾಗಿ ಕುಸಿದಿರುವುದು ಇದೇ ಮೊದಲು. ನಮ್ಮ ಸಮಾಜದ 'ಪುತ್ರ ಪ್ರೀತಿ'ಯ ಫಲ ಇದು. 'ಗಂಡುಮಗು ಎಂದರೆ ಪ್ರತಿಷ್ಠೆ. ಹೆಣ್ಣುಮಗು ಎಂದರೆ ಖರ್ಚಿನ ಬಾಬತ್ತು' ಎಂಬಂತಹ ಮನೋಭಾವದಿಂದಾಗಿ ಹೆಣ್ಣುಮಗು ಹುಟ್ಟುವ ಹಕ್ಕನ್ನೇ ಕಳೆದುಕೊಳ್ಳುತ್ತಿದ್ದಾಳೆ.**

ಹೆಣ್ಣುಮಕ್ಕಳ ಸಂಖ್ಯೆ ಕಡಿಮೆ ಆಗುತ್ತಿರುವುದು ಈ ಬಾರಿಯ (2011) ಜನಗಣತಿಯಲ್ಲೂ ಮತ್ತೆ ವ್ಯಕ್ತವಾಗಿದೆ. ಜನಗಣತಿಯ ಪ್ರಾಥಮಿಕ ಅಂಕಿ ಅಂಶಗಳ ಪ್ರಕಾರ, ರಾಷ್ಟ್ರದಲ್ಲಿ 0–6 ವಯೋಮಾನದ 1000 ಗಂಡುಮಕ್ಕಳಿಗೆ ಕೇವಲ 914 ಹೆಣ್ಣುಮಕ್ಕಳು ಇದ್ದಾರೆ. 2001ರ ಜನಗಣತಿಯಲ್ಲಿ ಹೆಣ್ಣುಮಕ್ಕಳ ಅನುಪಾತ 927 ಇತ್ತು. ಈಗ ಹೆಣ್ಣುಮಕ್ಕಳ ಸಂಖ್ಯೆ ಮತ್ತಷ್ಟು ಕುಸಿತ ದಾಖಲಿಸಿದೆ. ಸ್ವತಂತ್ರ ಭಾರತದಲ್ಲಿ ಗಂಡು–ಹೆಣ್ಣುಮಕ್ಕಳ ಅನುಪಾತ ಇಷ್ಟೊಂದು ತೀವ್ರವಾಗಿ ಕುಸಿದಿರುವುದು ಇದೇ ಮೊದಲು. ಎಲ್ಲಾ ರಾಜ್ಯಗಳಲ್ಲೂ ಈ ವಯೋಮಾನದ ಮಕ್ಕಳ ಪೈಕಿ ಹೆಣ್ಣುಮಕ್ಕಳು ಕಾಣೆಯಾಗುತ್ತಿದ್ದಾರೆ.

ನಮ್ಮ ಸಮಾಜದ 'ಪುತ್ರ ಪ್ರೀತಿ'ಯ ಫಲ ಇದು. 'ಗಂಡುಮಗು ಎಂದರೆ ಪ್ರತಿಷ್ಠೆ. ಹೆಣ್ಣುಮಗು ಎಂದರೆ ಖರ್ಚಿನ ಬಾಬತ್ತು' ಎಂಬಂತಹ ಮನೋಭಾವ ಸಮಾಜದ ಸುಶಿಕ್ಷಿತರು ಎನಿಸಿಕೊಳ್ಳುವಂತಹ ವರ್ಗದಲ್ಲೂ ಹಾಸುಹೊಕ್ಕಾಗಿದೆ. ಹೀಗಾಗಿಯೇ ಹೆಣ್ಣುಮಗು ಹುಟ್ಟುವ ಹಕ್ಕು ಕಳೆದುಕೊಳ್ಳುತ್ತಿದ್ದಾಳೆ. ಹೆಣ್ಣುಮಗು ಹುಟ್ಟುವುದನ್ನೇ ತಡೆಯುವುದನ್ನು ಅತಿ ಸುಲಭ ಮಾಡಿ ಹೆಣ್ಣು ಮಕ್ಕಳು ಕಾಣೆಯಾಗುವುದಕ್ಕೆ ಅತ್ಯಾಧುನಿಕ ತಂತ್ರಜ್ಞಾನಗಳು ಸಹಕರಿಸುತ್ತಿರುವುದು ಮತ್ತೊಂದು ವಿಪರ್ಯಾಸ. ಹೊಟ್ಟೆಯಲ್ಲಿರುವ ಭ್ರೂಣ ಗಂಡೋ ಅಥವಾ ಹೆಣ್ಣೋ ಎಂಬುದನ್ನು ಪತ್ತೆ ಮಾಡಬಹುದಾದ ಅಲ್ಟ್ರಾಸೌಂಡ್ ಮೆಷಿನ್‌ಗಳ ಸಂಖ್ಯೆ ಕರ್ನಾಟಕದಲ್ಲಿ 4000. ಬೆಂಗಳೂರು ನಗರವೊಂದರಲ್ಲೇ ಈಗ 1200 ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಕೇಂದ್ರಗಳಿವೆ. ಇನ್ನು ವಾಹನಗಳಲ್ಲಿ ಮನೆ ಬಳಿಗೇ ಮೊಬೈಲ್ ಸ್ಕ್ಯಾನಿಂಗ್ ಮೆಷಿನ್‌ಗಳನ್ನು ಒಯ್ಯುವ ಸೌಲಭ್ಯಗಳೂ ಇವೆ. ಹೀಗಾಗಿ ತಾಯಿಯ ಗರ್ಭದಲ್ಲಿರುವ ಭ್ರೂಣದ ಲಿಂಗವನ್ನು ಪತ್ತೆ ಮಾಡಿ ಹೆಣ್ಣು ಭ್ರೂಣವನ್ನು ಗರ್ಭಪಾತ ಮಾಡಿಸಿಕೊಳ್ಳುವಂತಹ ಸುಲಭದ ಮಾರ್ಗಗಳು ಈಗ ಬಹಳಷ್ಟು.

ಇಂತಹ ಒಂದು ಸಂದರ್ಭದಲ್ಲಿ ರಾಜ್ಯದಲ್ಲಿ 'ಗಂಡು–ಹೆಣ್ಣುಮಕ್ಕಳ ಜನನ ಅನುಪಾತ' ಕುರಿತಂತೆ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಮಿಷನ್ (ಎನ್‌ಆರ್‌ಎಚ್‌ಎಂ) ಬಿಡುಗಡೆ ಮಾಡಿರುವ ಅಂಕಿ ಅಂಶಗಳೂ, ಸಮಾಜಕ್ಕೆ ಹೆಣ್ಣುಮಗು ಬೇಡದವಳಾಗಿದ್ದಾಳೆ ಎಂಬುದನ್ನು ಎತ್ತಿ ತೋರುತ್ತಿದೆ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಡಿ ಕಾರ್ಯ ನಿರ್ವಹಿಸುವ ಎನ್‌ಆರ್‌ಎಚ್‌ಎಂ ವರದಿ ಪ್ರಕಾರ, ಕರ್ನಾಟಕದಲ್ಲಿ 2010–11ರಲ್ಲಿ, 1000 ಗಂಡು ಶಿಶುಗಳಿಗೆ ಕೇವಲ 926 ಹೆಣ್ಣು ಶಿಶುಗಳು ಹುಟ್ಟಿವೆ. ಕಳೆದ ವರ್ಷ ಈ ಪ್ರಮಾಣ 948 ಇತ್ತು. 2008–09ರಲ್ಲಿ ರಾಜ್ಯದಲ್ಲಿ ಒಟ್ಟು 4,64,472 ಗಂಡು ಹಾಗೂ 4,34,997 ಹೆಣ್ಣು ಶಿಶುಗಳು ಜನಿಸಿದ್ದವು. ಈ ಅಂಕಿ ಅಂಶಗಳ ಪ್ರಕಾರ, ಹೆಣ್ಣು ಶಿಶು ಲಿಂಗ ಅನುಪಾತ 937. 2009–10ರಲ್ಲಿ ಈ ಅನುಪಾತ 948ಕ್ಕೆ ಸ್ವಲ್ಪಮಟ್ಟಿಗೆ ಏರಿಕೆ ಆಗಿತ್ತು. ಈಗ ಇದು ಮತ್ತೆ 926ಕ್ಕೆ ತೀವ್ರಮಟ್ಟದಲ್ಲಿ ಇಳಿಕೆಯಾಗಿದೆ.

ಕುಸಿಯುತ್ತಿರುವ ಈ ಹೆಣ್ಣು–ಗಂಡುಮಕ್ಕಳ ಅನುಪಾತವನ್ನು ಸರಿದಾರಿಗೆ ತರುವುದಾದರೂ ಹೇಗೆ? ಬಡತನ ರೇಖೆಯಿಂದ ಕಡಿಮೆ ಇರುವ ಕುಟುಂಬದಲ್ಲಿ ಜನಿಸುವ ಪ್ರತಿ ಹೆಣ್ಣು ಮಗುವಿಗೆ ಆರ್ಥಿಕ ಬಲ ನೀಡುವಂತಹ 'ಭಾಗ್ಯಲಕ್ಷ್ಮಿ' ವಿಮಾ ಯೋಜನೆಯನ್ನು ಸರ್ಕಾರ ಜಾರಿಗೊಳಿಸಿದೆ. ಆದರೆ ಸರ್ಕಾರಕ್ಕೆ ಭಾರಿ ಪ್ರಚಾರ ಸಾಧನವಾಗಿರುವ ಈ ಯೋಜನೆಯ ಅನುಷ್ಠಾನ ರೀತಿ ನೀತಿಗಳ ಬಗೆಗೇ ಸಾಕಷ್ಟು ಟೀಕೆಗಳಿವೆ. ಈ ಯೋಜನೆ, ಹೆಣ್ಣುಮಗುವಿನ ಕುರಿತಂತಹ ಭಾವನೆಗಳನ್ನು ಬದಲಿಸುವಲ್ಲಿ ಯಶಸ್ವಿಯಾಗಿದೆ ಎಂಬುದು ಸರ್ಕಾರದ ಪ್ರತಿಪಾದನೆ. ಹೀಗಾಗಿ ಹೆಣ್ಣುಮಗು ಜನನ ಸಂಖ್ಯೆ ಏರುಮುಖ ಕಂಡಿದೆ ಎಂಬಂತಹ ಸರ್ಕಾರದ ವಾದಗಳು ಎಷ್ಟು ಸರಿ ಎಂಬಂತಹ ಪ್ರಶ್ನೆಯನ್ನು ಎನ್‌ಆರ್‌ಎಚ್‌ಎಂ ಅಂಕಿಅಂಶಗಳು ಎತ್ತಿವೆ. ಭಾಗ್ಯಲಕ್ಷ್ಮಿ ಯೋಜನೆಯ ದುಪ್ಪಟ್ಟು ಲಾಭ ಪಡೆಯಲು ಒಂದೇ ಹೆಣ್ಣುಮಗುವಿನ ಜನನವನ್ನು ಎರಡೆರಡು ಬಾರಿ ನೋಂದಾಯಿಸಿರುವ ಸಂದರ್ಭಗಳೂ ಇವೆ ಎಂಬಂತಹ ವರದಿಗಳೂ ಚಾಲ್ತಿಯಲ್ಲಿವೆ.

ಗರ್ಭಧಾರಣೆ ಪೂರ್ವ ಹಾಗೂ ಪ್ರಸವ ಪೂರ್ವ ಪತ್ತೆ ಪರೀಕ್ಷೆ – ಲಿಂಗ ಆಯ್ಕೆ ನಿಷೇಧ (ಪಿಸಿ ಅಂಡ್ ಪಿಎನ್‌ಡಿಟಿ) ಕಾಯಿದೆ ರಾಷ್ಟ್ರದಲ್ಲಿ ಜಾರಿಯಲ್ಲಿದೆ. ಆದರೆ ಸ್ವತಂತ್ರ ಸಾಕ್ಷಿಗಳು ಹಾಗೂ ಸಾಕ್ಷ್ಯಾಧಾರಗಳ ಕೊರತೆಗಳಿಂದಾಗಿ ತಪ್ಪು ಮಾಡಿದವರು ಕಾನೂನು ಕುಣಿಕೆಗೆ ಸಿಗದಿರುವ ಕಟು ವಾಸ್ತವವೂ ನಮ್ಮೆದುರಿಗಿದೆ. ಹೀಗಾಗಿಯೇ 'ಭ್ರೂಣ ಲಿಂಗ ಪತ್ತೆ ಹಾಗೂ ಹೆಣ್ಣು ಭ್ರೂಣ ಹತ್ಯೆ' ಎಂಬುದು ಒಂದು ಅಂದಾಜಿನ ಪ್ರಕಾರ ಈಗ ರಾಷ್ಟ್ರದಲ್ಲಿ 1000 ಕೋಟಿ ರೂಪಾಯಿಗಳ ಉದ್ಯಮವಾಗಿ ಬೆಳೆದಿದೆ. ಇಂತಹ ಒಂದು ಕ್ಲಿಷ್ಟಕರ ಸನ್ನಿವೇಶದಲ್ಲಿ ಹೆಣ್ಣುಮಗು ಕುರಿತಂತೆ ಸಮಾಜದಲ್ಲಿ ಸಕಾರಾತ್ಮಕ ಪರಿಸರ ಸೃಷ್ಟಿಸುವಂತಹ ಆಂದೋಲನವನ್ನು ಸರ್ಕಾರ ಹಾಗೂ ಸಮಾಜ ದೊಡ್ಡ ಮಟ್ಟದಲ್ಲೇ ರೂಪಿಸಬೇಕಿದೆ.

■ ಸಿ.ಜಿ. ಮಂಜುಳಾ

